

“ಇವತ್ತು ಆಕೆಯನ್ನು ನೋಡಿ ನನಗೆ ನಿಜವಾಗಲೂ ಸಂತೃಪ್ತಿಯಾಯಿತು. ಆಕೆಯನ್ನು ನಾನು ಎಂದಿಗೂ ಮರೆಯಲು ಸಾಧ್ಯವಿರಲಿಲ್ಲ. ಆಕೆಯನ್ನು ನೆನೆದಾಗಲೆಲ್ಲಾ ನನ್ನ ರಕ್ತ ಕುದಿಯುತ್ತಿತ್ತು. ಕೊನೆಗೂ, ನಾನಲ್ಲದಿದ್ದರೂ ಪ್ರಕೃತಿ ಅವಳ ಮೇಲೆ ಸೇಡು ತೀರಿಸಿಕೊಂಡಿತ್ತು.

ದೂರದಿಂದಲೇ ನೋಡಿ ಬಾಯಿ ಚಪ್ಪರಿಸಿದ್ದು, ಅಷ್ಟೇ. ಅದು ತುಂಬಾ ದುಬಾರಿ ಎನ್ನುವುದು ಬಿಟ್ಟರೆ ಅದನ್ನು ತಿನ್ನಬೇಕೆಂಬ ಬಯಕೆ ನನಗೆ ಯಾವಾತ್ತೂ ಮೂಡಿರಲಿಲ್ಲ.

“ನಿಮ್ಮಲ್ಲಿ ಆ ದಪ್ಪ ಗಾತ್ರದ ಆಸ್ಪರಾಗಸ್‌ಗಳು ಇವೆಯಾ ಎಂದು ಮೇಡಂ ಕೇಳುತ್ತಿದ್ದಾರೆ.” ನಾನು ವೇಯ್ಟರನಿಗೆ ವಿಚಾರಿಸಿದೆ.

ಅವನು, “ಕ್ಷಮಿಸಿ ಸರ್, ಇಂದು ನಮ್ಮಲ್ಲಿ ಅಸ್ಪಾರಾಗಸ್‌ಗಳು ಇಲ್ಲ.” ಎಂದು ಹೇಳಲಿ ಎಂಬ ಸುಳ್ಳು ನಿರೀಕ್ಷಣೆಯಲ್ಲಿ ಕಾದು ಕುಳಿತೆ. ವೇಯ್ಟರನ ಮುಖದ ಮೇಲೆ ಊರಗಲ, ಆದರೆ ನನ್ನ ಪಾಲಿಗೆ ಅಶ್ಲೀಲವಾದ ನಗು ಮೂಡಿತು. ಅವನು ಹೆಮ್ಮೆಯಿಂದ ಅವರಲ್ಲಿ ದೊಡ್ಡ ಗಾತ್ರದ, ಎಳೆಯ, ಬಾಯೊಳಗಿಟ್ಟರೆ ಬೆಣ್ಣೆಯಂತೆ ಕರಗುವ ಸ್ವಾದಿಷ್ಟ ಅಸ್ಪಾರಾಗಸ್‌ಗಳು ಇವೆ ಎಂದ.

“ನಿಜ ಹೇಳಬೇಕು ಅಂದರೆ ನನಗೆ ಅಂತಹ ಹಸಿವೆ ಏನೂ ಇಲ್ಲ.” ನನ್ನ ಸಾಹಿತ್ಯಾಭಿಮಾನಿ ಹೇಳಿದಳು. “ಆದರೂ ನಿಮ್ಮ ಒತ್ತಾಯಕ್ಕಾಗಿಯಾದರೂ ರುಚಿ ನೋಡದಿರುವುದು ಸರಿಯಲ್ಲವೆನಿಸುತ್ತದೆ.”

ನಾನು ಒಂದು ಪ್ಲೇಟ್ ಅಸ್ಪಾರಾಗಸನ್ನು ಆರ್ಡರ್ ಮಾಡಿದೆ.

“ನೀವು ತಿನ್ನುವುದಿಲ್ಲವೇ?” ಆಕೆ ಆಶ್ಚರ್ಯದಿಂದ ಹುಬ್ಬೇರಿಸಿದಳು. “ನನಗೆ ಗೊತ್ತು. ತುಂಬಾ ಜನರಿಗೆ ಅಸ್ಪಾರಾಗಸ್ ಇಷ್ಟವಾಗುವುದಿಲ್ಲ. ಅಲ್ಲದೆ, ಮಟನ್ ಚಾಪ್ಸ್‌ನಂತಹ ಹಾಳೂ ಮೂಳು ತಿಂದು ತಿಂದು ನಿಮ್ಮ ನಾಲಿಗೆಯ ರುಚಿಯೇ ಹಾಳಾಗಿಹೋಗಿದೆ!” ಆಕೆ ಕನಿಕರದಿಂದೆಂಬಂತೆ ನನ್ನನ್ನು ನೋಡಿದಳು.

ಅಸ್ಪಾರಾಗಸ್ ತಯಾರಾಗಲು ಕೊಂಚ ಹೊತ್ತು ಹಿಡಿಯಿತು; ನಾವು ಕಾದು ಕುಳಿತೆವು.

ನನಗೆ ಒಮ್ಮೆಲೇ ಆತಂಕದಿಂದ ಹೊಟ್ಟೆ ತೊಳೆಸಿದಂತಾಗಿ ಸಣ್ಣದಾಗಿ ಬೆವರತೊಡಗಿದೆ. ಹೃದಯ ತಾಳತಪ್ಪಿದೆ ಎಂಬಂತೆ ಯದ್ವಾತದ್ವಾ ಬಡಿದುಕೊಳ್ಳಲಾರಂಭಿಸಿತು. ನಾನು ಇಡೀ ತಿಂಗಳು ಬದುಕಬೇಕಿತ್ತು. ನನ್ನ ಬಳಿ ಇದ್ದ ಎಂಬತ್ತು ಫ್ರ್ಯಾಂಕ್‌ಗಳಲ್ಲಿ ಎಷ್ಟು ಉಳಿಯಬಹುದು ಎಂಬ ಚಿಂತೆ ನನ್ನನ್ನು ಕಾಡತೊಡಗಿತು. ಕೊನೆಗೆ ಉಳಿಯುವುದು ಇರಲಿ, ಬಿಲ್ಲು ಚುಕ್ತಾ ಮಾಡಲಿಕ್ಕಾದರೂ ಸಾಕಾಗಬಹುದೆ?

ಒಂದು ವೇಳೆ ಬಿಲ್ಲನ್ನು ಚುಕ್ತಾ ಮಾಡಲು ದುಡ್ಡು ಕಡಿಮೆಯಾಗಿ ನನ್ನ ಅಭಿಮಾನಿಯಿಂದ ಕೇಳುವಂತಾದರೆ? ಆ ಸನ್ನಿವೇಶವನ್ನು ಕಲ್ಪಿಸಿಕೊಳ್ಳಲೂ ನನ್ನಿಂದಾಗಲಿಲ್ಲ. ನನ್ನ ಜೇಬಿನಲ್ಲಿ ಎಷ್ಟು ಫ್ರ್ಯಾಂಕುಗಳಿವೆ ಎಂದು ನನಗೆ ಚೆನ್ನಾಗಿ ಗೊತ್ತಿತ್ತು. ಬಿಲ್ಲು ನನ್ನ ಸಾಮರ್ಥ್ಯಕ್ಕೆ ಮೀರುವಂತಿದ್ದರೆ, ನನ್ನ ಪರ್ಸ್ ಕಳುವಾಗಿದೆ ಎಂದು ನಟಿಸಲು ನಾನು ಮಾನಸಿಕವಾಗಿ ತಯಾರಾಗತೊಡಗಿದೆ... ಆದರೆ, ನನ್ನ ಅಭಿಮಾನಿಯ ಪರ್ಸೂ ಖಾಲಿ ಇದ್ದುದಾದರೆ?... ನನ್ನ ಮಿದುಳು ಚುರುಕಾಗಿ ಕೆಲಸ